



ಸಚೀಂದ್ರ–ಜಯಲಕ್ಷ್ಮಿ ದಂಪತಿ



ಸಚೀಂದ್ರ ಓದಿದ್ದು ಮೂರನೆಯ ತರಗತಿ. ಜಯಲಕ್ಷ್ಮಿ ಹತ್ತನೆಯ ತರಗತಿ ಕಲಿತಿದ್ದಾರೆ. ಯೂಟ್ಯೂಬ್ ನೋಡುವಾಗ ಜಯಲಕ್ಷ್ಮಿಗೆ ಬಂದ ಐಡಿಯಾ ಗೆರಟೆಯಿಂದ ವಸ್ತುಗಳ ತಯಾರಿಕೆ. ಪತಿಗೆ ಅವರದೇ ಮಾರ್ಗದರ್ಶನ. ಅದು ಕೂಡ ಷೋಕೇಸಿನಲ್ಲಿ ಇಡುವಂಥದ್ದಷ್ಟೇ ಆಗಿರಬಾರದು. ನಿತ್ಯ ಬಳಕೆಗೂ ಉಪಯುಕ್ತ ಆಗಬೇಕು ಎಂಬ ದೃಷ್ಟಿಯಿಂದ ಗೆರಟೆಯನ್ನು ಕತ್ತರಿಸಿ ಪ್ಲಾಸ್ಟಿಕ್ ಗಮ್ ಮೂಲಕ ಅಂಟಿಸುವ ಕೆಲಸ ಮಾಡಿದರು. ಆರಂಭದಲ್ಲಿ ಸರಿ ಬರಲಿಲ್ಲ. ಆದರೆ ನಿಧಾನವಾಗಿ ಕಲೆ ಒಲಿಯಿತು. ಅಚ್ಚುಕಟ್ಟಾದ ಚಹಾ ಕಪ್ ತಯಾರಾಯಿತು. ಈಗ ಸ್ಯಾನಿಟೈಸರ್ ಇಡುವ ಭರಣಿ, ತಣ್ಣಗಿನ ಪಾನೀಯ ಇಟ್ಟು ಮುಚ್ಚಳ ಹಾಕುವ ಪಾತ್ರೆ, ಕುಡಿಯುವ ನೀರಿಡುವ ಜಗ್, ಚಮಚ, ಕಪ್ ಸಾಸರ್, ನಂದಾದೀಪ, ತಾವರೆ, ಪೆನ್ ಸ್ಟ್ಯಾಂಡ್, ವಿದ್ಯುದ್ದೀಪ ಬೆಳಗಿಸಿಡುವ ಮರದಂತಹ ನೂರಾರು ಉಪಯುಕ್ತ ವಸ್ತುಗಳು ತಯಾರಾಗಿವೆ. ಗಣಪತಿ ಮತ್ತು ದೈತ್ಯ ಗಾತ್ರದ ಇರುವೆಗಳು ತಲೆಯೆತ್ತಿವೆ. ಸ್ಕೂಟರ್, ಫ್ಯಾನ್ ಮುಂತಾದ ಮಕ್ಕಳ ಆಟಿಕೆಗಳೂ ಆಕರ್ಷಣೀಯವಾಗಿವೆ.

ಬೇಡವೆಂದು ಬಿಸಾಡುವ ತೆಂಗಿನ ಗೆರಟೆಯನ್ನು ಒಲೆಗೆ ಹಾಕುವ ಬದಲು ಸ್ಥಳೀಯರು ಸಚೀಂದ್ರನಿಗೆ ಕೊಡುತ್ತಾರೆ. ಹಾಗೆ ತಂದ ಎಲ್ಲ ಗೆರಟೆಗಳೂ ಕಲೆಗೆ ಹೇಳಿಸಿದ್ದಲ್ಲ. ಅದಕ್ಕೆ ತಕ್ಕ ಅಳತೆ, ಹೊಂದಾಣಿಕೆಯೂ ಅಗತ್ಯ. ಎರಡು ಸಾವಿರ ಗೆರಟೆ ತಂದರೆ ಸೂಕ್ತವಾಗುವುದು ನೂರು ಮಾತ್ರ. ಹೆಕ್ಸಾ ಬ್ಲೇಡ್ ಬಳಸಿ ಅದನ್ನು ಕತ್ತರಿಸಬೇಕು. ತುಂಡುಗಳನ್ನು ಅಂಟಿಸಬೇಕು. ಫೈನ್ ಪೇಪರ್ ಬಳಸಿ, ಪಾಲಿಷ್ ಮಾಡಿ ವಾರ್ನಿಷ್ ಬಳಿಯಬೇಕು. ಕೈಯ ಕೆಲಸ ಹೆಚ್ಚು. ಒಂದು ಇರುವೆಗೆ ಒಂಭತ್ತು ಗೆರಟೆ, ಒಂಭತ್ತು ತಾಸು ಬೇಕಾಗಿದ್ದರೆ ಗಣಪತಿ ಮತ್ತು ದೀಪ ತಯಾರಿಸಲು ಏಳು ದಿವಸಗಳಾಗಿವೆ. ದಂಪತಿ ಜತೆಗೂಡಿ ಕೆಲಸವನ್ನು ಹಂಚಿಕೊಳ್ಳುತ್ತಾರೆ.

ಹಲವಾರು ಸಮ್ಮೇಳನಗಳಲ್ಲಿ ದಂಪತಿಯ ಈ ಕಲೆಯ ಪ್ರದರ್ಶನವಾಗಿದೆ. 200 ರೂಪಾಯಿ ಬೆಲೆಗೆ ಚಹಾ ಕಪ್ ಮಾರಾಟವಾಗಿದ್ದರೆ ಗಣಪತಿಗೆ ಒಂದೂವರೆ ಸಾವಿರ ಕೊಟ್ಟು ಕೊಂಡವರಿದ್ದಾರೆ. ಸರ್ಕಾರದ ಮಂದಾರ ಸಂಜೀವಿನಿ ಯೋಜನೆಯಲ್ಲಿ ಅವರಿಗೆ ಯಂತ್ರೋಪಕರಣ ಖರೀದಿಗೆ ಸಾಲವೂ ದೊರಕಿದೆ. ಇದರಿಂದ ಕಲೆಯನ್ನು ಇನ್ನಷ್ಟು ಸುಧಾರಿಸುವ ಆಶಯವೂ ಅವರಿಗಿದೆ.

**ಸಂಪರ್ಕ: 90083 85425**